Received on 20/7/2021
wcp 4:33 PM

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ಕನ್ನಡ ಕಾಯಕ ವರ್ಷ 2020-2021**

ಸಂಖ್ಯೆ: ಕಾಶಿಇ/219/ನಿವೃತ್ತಿ2022/ಸಿಆರ್2/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:15-07-2021

**ಸುತ್ತೋಲೆ**

ವಿಷಯ: 2022ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ಹೊಂದಲಿರುವ ಖಾಸಗಿ ಅನುದಾನಿತ ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರುಗಳ ವಿವರಗಳನ್ನು ಕಳುಹಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ತಿಳಿಸುವುದೇನೆಂದರೆ ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ (ಪದವಿ, ಕಾನೂನು, ಚಿತ್ರಕಲಾ ಹಾಗೂ ಬಿ.ಎಡ್) ಕಾಲೇಜುಗಳಲ್ಲಿ ದಿನಾಂಕ: 01-01-2022 ರಿಂದ 31-12-2022ರ ಕ್ಯಾಲೆಂಡರ್ ಅವಧಿಯಲ್ಲಿ ವಯೋನಿವೃತ್ತಿ ಹೊಂದಲಿರುವ ಅನುದಾನಿತ ಬೋಧಕ ಮತ್ತು ಬೋಧಕೇತರ ವರ್ಗದ ನೌಕರರುಗಳ ವಿವರಗಳನ್ನು ಪ್ರತ್ಯೇಕವಾಗಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿ ಕಳುಹಿಸಿರುವ ಅನುಬಂಧದಲ್ಲಿ ಕಾಲೇಜು ಪ್ರಾಂಶುಪಾಲರುಗಳಿಂದ ವಿವರ ಪಡೆದು ಕ್ರೋಢೀಕರಿಸಿ ದಿನಾಂಕ: 31-08-2021ರೊಳಗೆ ಈ ಕಛೇರಿಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ.

1. ನಿವೃತ್ತಿ ಹೊಂದುತ್ತಿರುವವರ ಜನ್ಮ ದಿನಾಂಕವನ್ನು ತಮ್ಮ ಕಛೇರಿಯಲ್ಲಿ ಲಭ್ಯವಿರುವ ದಾಖಲಾತಿಗಳೊಂದಿಗೆ ಖುದ್ದಾಗಿ ಪರಿಶೀಲಿಸಿ, ದೃಢೀಕರಿಸಿ ಮಾಹಿತಿಗಳನ್ನು ಕಳುಹಿಸುವುದು.
2. ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳ ಬೋಧನಾ ವಿಷಯವನ್ನು ಕಡ್ಡಾಯವಾಗಿ ನಮೂದಿಸಬೇಕು.
3. ನಿವೃತ್ತರಾಗುವ ಸಿಬ್ಬಂದಿಗಳ ನಿವೃತ್ತಿ ದಿನಾಂಕದ ಜೇಷ್ಠತೆಯನ್ನು ಅನುಸರಿಸಿ ನಿವೃತ್ತಿ ದಿನಾಂಕ ನಮೂದಿಸಿರಬೇಕು (Monthwise) ಹಾಗೂ ನಮೂನೆಯಲ್ಲಿ ಬೋಧಕರ ವಿವರ ಅನುಬಂಧ-01ರಲ್ಲಿ ಹಾಗೂ ಬೋಧಕೇತರರ ವಿವರ ಅನುಬಂಧ-02ರಲ್ಲಿ **(Separate List of Teaching & Non Teaching)** ಪ್ರತ್ಯೇಕವಾಗಿ ಬೇರೆ ಬೇರೆ ನಮೂನೆಗಳಲ್ಲಿ ನಮೂದಿಸಿ ಎರಡು ಪಟ್ಟಿಗಳನ್ನು ತಯಾರಿಸಿ ಕಳುಹಿಸಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಮುಂದುವರೆದು ನಿವೃತ್ತಿ ದಿನಾಂಕಗಳನ್ನು 01-01-2022 ಮಾದರಿಯಲ್ಲೇ(ಉದಾ ಚಿಹ್ನೆ: . , / ಉಪಯೋಗಿಸಬಾರದು) ಮತ್ತು ವಿವರಗಳನ್ನು ಕನ್ನಡದಲ್ಲಿ ಕಡ್ಡಾಯವಾಗಿ ನಮೂದಿಸಬೇಕು.
4. ಪಿಂಚಣಿ ವಿಭಾಗದ ಇ-ಮೇಲ್ ವಿಳಾಸ <u>dce.pension@gmail.com</u> ಗೆ ಸಾಫ್ಟ್ ಪ್ರತಿಯನ್ನು <u>MS excel</u> ತಂತ್ರಾಂಶದಲ್ಲಿ ಮೇಲ್ ಮಾಡಿ ಹಾಗೂ ಮುದ್ರಿತ ಪ್ರತಿಯನ್ನು ಅಂಚೆ ಮೂಲಕ ಕಳುಹಿಸಲು ತಿಳಿಸಲಾಗಿದೆ.

ಅಡಕ: ನಮೂನೆ

16/7/21
ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1 ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಶಿವಮೊಗ್ಗ ಹಾಗೂ ಧಾರವಾಡ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

2. ಎಲ್ಲಾ ಖಾಸಗಿ ಅನುದಾನಿತ ಪದವಿ, ಬಿಎಡ್ ಹಾಗೂ ಕಾನೂನು / ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ತಮ್ಮ ಕಾಲೇಜಿನಲ್ಲಿ ನಿವೃತ್ತಿ ಹೊಂದಲಿರುವ ಸಿಬ್ಬಂದಿ ವರ್ಗದವರ ಬಗ್ಗೆ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ದಿನಾಂಕ:31-08-2021ರೊಳಗಾಗಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಮಾತ್ರ ಕಳುಹಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

3. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

4. ಹೆಚ್ಚುವರಿ ಪ್ರತಿ. ಕಛೇರಿ ಪ್ರತಿ.

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ವಿಷಯ (Subject) | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

<u>ದೃಢೀಕರಣ:</u> ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ಬೋಧಕೇತರ ಸಿಬ್ಬಂದಿಯವರ ವಿವರಗಳು (ಪ್ರತ್ಯೇಕವಾಗಿ)

| ಕ್ರಮ ಸಂಖ್ಯೆ | ಹೆಸರು ಶ್ರೀ/ ಶ್ರೀಮತಿ | ಪದನಾಮ | ಕಛೇರಿ/ಕಾಲೇಜಿನ ಹೆಸರು ಮತ್ತು ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | 2022ನೇ ಕ್ಯಾಲೆಂಡರ್ ವರ್ಷದಲ್ಲಿ ವಯೋನಿವೃತ್ತಿ ಹೊಂದಲಿರುವ ದಿನಾಂಕ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

<u>ದೃಢೀಕರಣ:</u> ಮೇಲ್ಕಂಡ ಸಿಬ್ಬಂದಿಯವರ ಜನ್ಮ ದಿನಾಂಕವನ್ನು ಅವರ ಮೂಲ ಸೇವಾ ಪುಸ್ತಕದ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ನಮೂದಾಗಿರುವ ಜನ್ಮ ದಿನಾಂಕದೊಂದಿಗೆ ತಾಳೆ ಮಾಡಿ ಸರಿಯಾಗಿದೆ ಎಂದು ದೃಢೀಕರಿಸಿರುತ್ತೇನೆ

ಪ್ರಾಂಶುಪಾಲರು